STAR

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1002

ಸದಸ್ಯರ ಹೆಸರು : ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ)

ಉತ್ತರಿಸುವ ದಿನಾಂಕ : 20/08/2025

ಉತ್ತರಿಸುವ ಸಚಿವರು : ಕಂದಾಯ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಭೂಮಿ ನೀಡಿಕೆ ನಿಯಮಗಳು 1969ರನ್ವಯ ಯಾವ ಉದ್ದೇಶಕ್ಕಾಗಿ ಜಮೀನನ್ನು ನೀಡಲಾಗುವುದು: | ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ-8ರಡಿ ಕೃಷಿ ಉದ್ದೇಶಗಳು ಮತ್ತು ಸೈನಿಕ/ಮಾಜಿ ಸೈನಿಕ ಕೋಟಾದಡಿಯಲ್ಲಿ ಮಂಜೂರು ಮಾಡಲು<br>ನಿಯಮ-16ರಡಿ ಪ್ಲಾಂಟೇಶನ್ ಬೆಳೆಗಳನ್ನು ಬೆಳೆಸಲು ಭೂಮಿಯನ್ನು ಮಂಜೂರು ಮಾಡಲು<br>ನಿಯಮ-17ರಡಿ ಗೇರು ಬೀಜ ಬೇಸಾಯಕ್ಕೆ ಭೂಮಿ ಮಂಜೂರು ಮಾಡಲು<br>ನಿಯಮ-19 (1)ರಡಿ<br>(ಎ) ಶಿಕ್ಷಣ ಸಂಸ್ಥೆಗಳಿಗೆ,<br>(ಬಿ) ಸಹಕಾರಿ ಬೇಸಾಯ ಸಂಘಗಳಿಗೆ<br>(ಸಿ) ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾಪಂಚಾಯಿತಿಗಳಿಗೆ<br>(ಡಿ) ಬೇಸಾಯ, ಉದ್ಯಮ ಅಥವಾ ಇತರೆ ಯಾವುದೇ ಸಾರ್ವಜನಿಕ ಉಪಯೋಗದ ಉದ್ದೇಶಗಳಿಗಾಗಿ ಯಾವುದೇ ಕಂಪನಿ ಅಥವಾ ಸಂಘ<br>ನಿಯಮ-19(ಎ) ರಡಿ ಜಲಚರ ಅಥವಾ ಪ್ರಾನ್ ಬೇಸಾಯಕ್ಕಾಗಿ ಚೌಳಾಗಿರುವ ನೀರಿನ ಭೂಮಿಯನ್ನು ಗುತ್ತಿಗೆ ಕೊಡುವುದು.<br>ನಿಯಮ-20(1)(ಸಿ) ರಡಿ ಗೃಹ ನಿರ್ಮಾಣ ಮಂಡಳಿ, (ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾಪಂಚಾಯಿತಿ) ಸಹಕಾರ ಸಂಘಗಳು ಮತ್ತು ಇತರ ಶಾಸನಬದ್ಧ ಮಂಡಳಿಗೆ ಭೂಮಿಯನ್ನು ಮಂಜೂರು ಮಾಡುವುದು.<br>ನಿಯಮ 21 ರಡಿ ಮತೀಯ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಭೂಮಿಯನ್ನು ಮಂಜೂರು ಮಾಡಲು<br>ನಿಯಮ-22ರಡಿ ಕೈಗಾರಿಕಾ ಸಂಸ್ಥೆಗಳಿಗೆ ಭೂಮಿಯ ಮಂಜೂರು ಮಾಡಲು<br>ನಿಯಮ-22(ಎ)ರಡಿ ಕೈಗಾರಿಕೆ ಶಿಕ್ಷಣ ಕಲ್ಯಾಣ ಚಟುವಟಿಕೆಗಳು, ಧಾರ್ಮಿಕ, ಬೇಸಾಯ, ಕೃಷಿಯೇತರ, ಭೂ ಬಂಧಿತ ಸರ್ಕಾರಿ ಭೂಮಿ ನಿಯಮ-22(ಎ)(3)(i)ರಡಿ ಎಲ್ಲಾ ಸರ್ಕಾರಿ ಇಲಾಖೆಗಳಿಗೆ ಭೂಮಿಯನ್ನು ಉಚಿತವಾಗಿ ಮಂಜೂರು ಮಾಡಲು<br>ನಿಯಮ-22(ಎ)(3)(iii)ರಡಿ ವಸತಿಯೋಜನೆಯ |

| | | |
|---|---|---|
| | | ಉದ್ದೇಶಕ್ಕಾಗಿ ಭೂಮಿಯನ್ನು ಉಚಿತವಾಗಿ ಮಂಜೂರು ಮಾಡಲು<br>ನಿಯಮ-22(ಎ)(3)(iV)ರಡಿ ಕೇಂದ್ರ ಅಥವಾ ಭಾರತ ಸರ್ಕಾರದ ಸಾರ್ವಜನಿಕ ಯೋಜನೆಗಳಿಗೆ ಮಂಜೂರು ಮಾಡಲು<br>ನಿಯಮ-23(ಎ) ಗೋಡಂಬಿ ಕೃಷಿಯ ಉದ್ದೇಶಕ್ಕಾಗಿ ಜಮೀನುಗಳನ್ನು ಗುತ್ತಿಗೆ ಪಡೆದ ವ್ಯಕ್ತಿಗಳಿಗೆ ಗುತ್ತಿಗೆ ಭೂಮಿಯನ್ನು ಮಂಜೂರು ಮಾಡುವುದು. |
| ಆ) | ಕರ್ನಾಟಕ ಭೂಮಿ ನೀಡಿಕೆ ನಿಯಮಗಳು 1969ರನ್ವಯ ಪ್ರಸ್ತುತ ಗುತ್ತಿಗೆ ಅವಧಿಯಡಿಯಲ್ಲಿ ನಡೆಯುತ್ತಿರುವ ಕ್ಲಬ್‌ಗಳು ಯಾವುವು: (ಕ್ಲಬ್‌ವಾರು ಗುತ್ತಿಗೆ ಅವಧಿ ನೀಡಿದ ವರ್ಷವಾರು ಸಂಪೂರ್ಣವಾದ ಮಾಹಿತಿ ನೀಡುವುದು) | 1.ಬೆಂಗಳೂರು ನಗರಜಿಲ್ಲೆ. ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ, ಹೋಬಳಿ, ಹೊಸಕೆರೆಹಳ್ಳಿ, ಗ್ರಾಮದ ಸರ್ವೆ.ನಂ. 75/1 ರಲ್ಲಿ 1-00 ಎಕರೆ ಜಮೀನನ್ನು ಬೆಂಗಳೂರು ಪ್ರೆಸ್ ಕ್ಲಬ್ (ರಿ), ಬೆಂಗಳೂರು" ರವರಿಗೆ ದಿನಾಂಕ:03.04.2019 ರಿಂದ 30 ವರ್ಷ ಗುತ್ತಿಗೆಗೆ ಸರ್ಕಾರದಿಂದ ಆದೇಶವಾಗಿರುತ್ತದೆ. |
| ಇ) | ಕಂದಾಯ ಇಲಾಖೆಯು ಅನುಮತಿ ನೀಡಿರುವ ಮೇರೆಗೆ ಗುತ್ತಿಗೆ ಅವಧಿಗೆ ನೀಡಿರುವ ಕ್ಲಬ್‌ಗಳು ಯಾವುವು; ಸದರಿ ಕ್ಲಬ್‌ಗಳಿಗೆ ಯಾವ ಮಾನದಂಡದ ಮೇಲೆ ಗುತ್ತಿಗೆ ನೀಡಲಾಗಿದೆ: (ಕ್ಲಬ್‌ವಾರು ಸಂಪೂರ್ಣವಾದ ಮಾಹಿತಿ ನೀಡುವುದು) | 2.ಬೆಂಗಳೂರು ಉತ್ತರ ತಾಲ್ಲೂಕು, ಕಸಬಾ ಹೋಬಳಿ, ಸೆಂಟ್‌ಮಾರ್ಕ್ಸ್ ರೋಡ್, 220 X 225 ಚ.ಅಡಿ ವಿಸ್ತೀರ್ಣವನ್ನು "ಬೋರಿಂಗ್ ಇನ್ಸ್‌ಟಿಟ್ಯೂಟ್" ಬೆಂಗಳೂರು ರವರಿಗೆ ದಿನಾಂಕ:19.03.1955 ರಿಂದ 99 ವರ್ಷ ಗುತ್ತಿಗೆಗೆ ಆದೇಶವಾಗಿರುತ್ತದೆ.<br><br>3.ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ಹೋಬಳಿ, ಕೋಡಿಹಳ್ಳಿ ಗ್ರಾಮದ ಸರ್ವೆ.ನಂ.145ರಲ್ಲಿ 12-00 ಎಕರೆ/ಗುಂಟೆ ಮತ್ತು ಚಲ್ಲಘಟ್ಟ ಗ್ರಾಮದ ಸರ್ವೆ.ನಂ. 16ರಲ್ಲಿ 112-00 ಎಕರೆ ಒಟ್ಟು 124-00 ಎಕರೆ ಜಮೀನಿನ ಗುತ್ತಿಗೆ ಅವಧಿಯನ್ನು ದಿನಾಂಕ: 17.05.2010ರಿಂದ 30 ವರ್ಷಗಳವರೆಗೆ ವಿಸ್ತರಿಸಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ಬೆಂಗಳೂರು ಇವರಿಗೆ ಹಸ್ತಾಂತರಿಸಿ ಕಂದಾಯ ಇಲಾಖೆಯಿಂದ ದಿನಾಂಕ: 05.03.2018ರಂದು ಆದೇಶಿಸಿದೆ. ನಂತರದಲ್ಲಿ ಪ್ರವಾಸೋದ್ಯಮ ಇಲಾಖೆಯು "ಮೆ॥ ಕರ್ನಾಟಕ ಗಾಲ್ಸ್ ಅಸೋಸಿಯೇಷನ್", ರವರಿಗೆ ಉಪಗುತ್ತಿಗೆಗೆ ನೀಡಿರುತ್ತದೆ.<br><br>4.ಬೆಂಗಳೂರು ಪೂರ್ವ ತಾಲ್ಲೂಕು ವರ್ತೂರು ಹೋಬಳಿ. ಗುಂಜೂರು ಗ್ರಾಮದ ಸರ್ವೆ.ನಂ. 71ರಲ್ಲಿ 2-13 ಎ/ಗು, 72ರಲ್ಲಿ 3-27 ಎ/ಗು ಒಟ್ಟು 6-00 ಎಕರೆ ಜಮೀನನ್ನು "ಮೆ\|\| ಗುಂಜೂರು ಕ್ಲಬ್" ರವರಿಗೆ ದಿನಾಂಕ:07.02.2013 ರಿಂದ 30 ವರ್ಷ ಗುತ್ತಿಗೆಗೆ ನೀಡಿರುತ್ತದೆ.<br><br>• ಜಿಲ್ಲಾಧಿಕಾರಿಗಳು ಶಿವಮೊ ಗ್ಗ ಇವರ ಆದೇಶ ಸಂಖ್ಯೆ: LND(1) CR 227/2004-05 ದಿನಾಂಕ:06-10-2004 ರ ಆದೇಶ ಮೇರೆಗೆ ಶಿವಮೊಗ್ಗ ತಾಲ್ಲೂಕು ಗಾಡಿಕೊಪ್ಪ ಸ.ನಂ 15 ರಲ್ಲಿ 2-00 ಎಕರೆ ಜಮೀನನ್ನು ಕಾರ್ಯದರ್ಶಿ ಸಿಟಿ ಹೆಲ್ತ್ ಕ್ಲಬ್ ಶಿವಮೊಗ್ಗ ರವರಿಗೆ 30 ವರ್ಷ ಅವಧಿಗೆ |

| | | |
|---|---|---|
| | | ಗುತ್ತಿಗೆಗೆ ನೀಡಲಾಗಿರುತ್ತದೆ.<br>• ದಕ್ಷಿಣ ಕನ್ನಡ ಜಿಲ್ಲೆ ಉಳ್ಳಾಲ ತಾಲೂಕು ತಲಪಾಡಿ ಗ್ರಾಮದ ಸ.ನಂ 161/2 ರಲ್ಲಿ 0.03 ಎಕ್ರೆ ಜಮೀನನ್ನು ವಿವೇಕ್ ಫ್ರೆಂಡ್ಸ್ ಸ್ಪೋರ್ಟ್ಸ್ ಕ್ಲಬ್ (ರಿ) ಇವರಿಗೆ ಜಿಲ್ಲಾಧಿಕಾರಿ ಕಚೇರಿ ನಡವಳಿ ಸಂಖ್ಯೆ ಎಲ್ ಎನ್ ಡಿ(3)ಸಿಆರ್2/2023/220415 22 03/02/2023 ಕ್ರೀಡಾಚಟುವಟಿಕೆಗಳ ಉದ್ದೇಶಕ್ಕಾಗಿ 10 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿರುತ್ತದೆ.<br>• ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ನಾರ್ಥ್ ಕೂರ್ ಕ್ಲಬ್ ಕರ್ಣಂಗೇರಿ ಗ್ರಾಮ ಸ.ನಂ:421/1 ರ 0.86 ಎಕರೆ ಜಮೀನನ್ನು 1991 ರಿಂದ ಮುಂದಿನ 30 ವರ್ಷಗಳವರೆಗೆ ಗುತ್ತಿಗೆ ನೀಡಲಾಗಿರುತ್ತದೆ.<br>• ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಹೊನ್ನಾವರ ಗ್ರಾಮದ ಸರ್ವೆ ನಂ.517 ಎಂ ಗಾಂವ್ ಠಾಣಾ ಜಮೀನಿನ ಪೈಕಿ 2-18-0 ಜಮೀನನ್ನು ರೋಟರಿ ಕ್ಲಬ್ ಹೊನ್ನಾವರರವರಿಗೆ ದಿನಾಂಕ:-11-11-2003 ರಂದು ಕರ್ನಾಟಕ ಭೂಮಂಜೂರಾತಿ ನಿಯಮಗಳು-1969 ರ ನಿಯಮ 19 (3) ರಡಿ ಪ್ರತಿ ಎಕರೆಗೆ ಪ್ರತಿ ವರ್ಷಕ್ಕೆ ರೂ.200=00 ದರದಲ್ಲಿ ಭೂಬಾಡಿಗೆ ವಿಧಿಸಿ ಗುತ್ತಿಗೆ ನೀಡಲಾಗಿರುತ್ತದೆ.<br><br>ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 19 ರಿಂದ 22ರವರೆಗೆ ಭೂಮಿಯನ್ನು ಗುತ್ತಿಗೆ ನೀಡಲು ಅವಕಾಶವಿದ್ದು, ಅದರಂತೆ ಗುತ್ತಿಗೆ ನೀಡಲಾಗಿದೆ. |
| ಈ) | ಕ್ಲಬ್‌ಗಳ ಭೂಮಿಯನ್ನು ಯಾವ ಉದ್ದೇಶಕ್ಕಾಗಿ ಬಳಸಲಾಗಿದೆ ಎಂಬುದನ್ನು ಗಣನೆಗೆ ತೆಗೆದುಕೊಂಡು ಭೂಮಿಗೆ ಬಾಡಿಗೆಯನ್ನು ಎಷ್ಟು ಪಾವತಿಸಬೇಕೆಂದು ನಿರ್ಧರಿಸುವವರು ಯಾರು: ಭೂಮಿಯ ಮೌಲ್ಯವನ್ನು ಯಾವ ರೀತಿ ಪರಿಗಣಿಸಲಾಗುವುದು: (ಸಂಪೂರ್ಣವಾದ ಮಾಹಿತಿ ನೀಡುವುದು) | ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 19 (4) (ಬಿ)ರಡಿ ಬೇಸಾಯೇತರ ಉದ್ದೇಶಕ್ಕಾಗಿ ಗುತ್ತಿಗೆ ನೀಡುವ ಭೂಮಿಗಳ ಸಂಬಂಧದಲ್ಲಿ ಆ ಭೂಮಿ ಇರುವ ಸ್ಥಳವನ್ನು, ಯಾವ ಉದ್ದೇಶಕ್ಕಾಗಿ ಅದನ್ನು ಉಪಯೋಗಿಸಲಾಗಿದೆಯೇ ಆ ಉದ್ದೇಶವನ್ನು ಗಣನೆಗೆ ತೆಗೆದುಕೊಂಡು ಅಂಥ ಭೂಮಿಯ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಗುತ್ತಿಗೆಯನ್ನು ಜಿಲ್ಲಾಧಿಕಾರಿಗಳು ಗೊತ್ತು ಮಾಡತಕ್ಕದ್ದು ಎಂದು ತಿಳಿಸಲಾಗಿದೆ.<br>ಮುಂದುವರೆದು ಕರ್ನಾಟಕ ಭೂ ಮಂಜೂರಾತಿ ನಿಯಮಗಳು-1969ರ ನಿಯಮಗಳ ಮೇರೆಗಿನ ನಿಯಮಗಳು, 19, 20, 21 ಮತ್ತು 22ರ ಪ್ರಕಾರ ಗುತ್ತಿಗೆ ನೀಡುವಾಗ ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 22-ಎ (1)ರ ಕೋಷ್ಟಕದಲ್ಲಿ ನಿಗದಿಪಡಿಸಿರುವ ಮೌಲ್ಯವನ್ನು ವಿಧಿಸಲಾಗುವುದು. ಮುಂದುವರೆದು ಸಂದರ್ಭಾನುಸಾರ ಸಚಿವ ಸಂಪುಟಕ್ಕೆ ಪ್ರಸ್ತಾವನೆಯನ್ನು ಮಂಡಿಸಿದ್ದಲ್ಲಿ ಸಚಿವ ಸಂಪುಟವನ್ನು ನಿರ್ಣಯದಂತೆ ಮೌಲ್ಯ ನಿಗದಿಪಡಿಸಲಾಗುವುದು. |

| | | |
|---|---|---|
| ಉ) | ಪ್ರಸ್ತುತ ನಿಗಧಿಪಡಿಸಿರುವ ಗುತ್ತಿಗೆ ಬಾಡಿಗೆಯನ್ನು ಎಲ್ಲಾ ಕ್ಲಬ್‌ಗಳು ಪಾವತಿಸುತ್ತಿವೆಯೇ: ಪಾವತಿಸದೇ ಇದ್ದಲ್ಲಿ, ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | 1. ಬೆಂಗಳೂರು ಪ್ರೆಸ್ ಕ್ಲಬ್ (ರಿ):<br><br>ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಹೊಸಕೆರೆಹಳ್ಳಿ ಗ್ರಾಮದ ಸರ್ವೆ.ನಂ. 75/1 ರಲ್ಲಿ 1-00 ಎಕರೆ ರವರಿಗೆ ಗುತ್ತಿಗೆ ನೀಡಿರುವ ಜಮೀನಿಗೆ ಸಂಬಂಧಪಟ್ಟಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣ ಸಂ:51549/2019 ವಿಚಾರಣಾ ಹಂತದಲ್ಲಿರುವುದರಿಂದ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಂಡಿರುವುದಿಲ್ಲ ಹಾಗೂ ವಾರ್ಷಿಕ ಗುತ್ತಿಗೆ ಮೊತ್ತ ಪಾವತಿಸಿರುವುದಿಲ್ಲ. ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥವಾದ ನಂತರ ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು.<br><br>2. ಬೋರಿಂಗ್ ಇನ್ಸ್‌ಟಿಟ್ಯೂಟ್, ಬೆಂಗಳೂರು: 2013-14 ನೇ ಸಾಲಿನಲ್ಲಿ ಮಹಾಲೆಕ್ಕಪರಿಶೋಧಕರ ವರದಿಯಂತೆ ರೂ 3.14 ಕೋಟಿ ಸರ್ಕಾರಕ್ಕೆ ನಷ್ಟ ಉಂಟಾಗಿರುವುದರಿಂದ ಸದರಿ ಮೊತ್ತವನ್ನು ಸರ್ಕಾರಕ್ಕೆ ಪಾವತಿಸಲು ಬೌರಿಂಗ್‌ಇನ್ಸ್‌ಟಿಟ್ಯೂಟ್‌ಕ್ಲಬ್‌ರವರಿಗೆ ದಿನಾಂಕ: 22-12-2017 ಮತ್ತು 19-11-2018 ರಂದು ಬಾಕಿ ಮೊತ್ತವನ್ನು ಪಾವತಿಸಲು ನೋಟೀಸ್‌ನ್ನು ಜಾರಿ ಮಾಡಿದ್ದು ಸದರಿ ನೋಟೀಸ್‌ಗೆ ಸಂಬಂಧಿಸಿದಂತೆ ಸಂಸ್ಥೆಯವರು ಘನ ಉಚ್ಚನ್ಯಾಯಾಲಯದಲ್ಲಿ WP 50118/2019 ರಂತೆ ಪ್ರಕರಣ ದಾಖಲಿಸಿರುತ್ತಾರೆ. ಸದರಿ ಘನ ಉಚ್ಚನ್ಯಾಯಾಲಯವು ದಿನಾಂಕ: 24-02-2023 ರಂದು ಮಧ್ಯಂತರ ತಡೆಯಾಜ್ಞೆ ನೀಡಿರುತ್ತದೆ.<br><br>ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರಿ ವಕೀಲರನ್ನು ಖುದ್ದಾಗಿ ಭೇಟಿ ಮಾಡಿ ನ್ಯಾಯಾಲಯದಲ್ಲಿ ಶೀಘ್ರ ವಿಚಾರಣೆಗೆ ಬರಲು ಅನುವಾಗುವಂತೆ ಮತ್ತು ಮಧ್ಯಂತರ ತಡೆಯಾಜ್ಞೆ ತೆರವುಗೊಳಿಸುವ ಸಂಬಂಧ ಮಧ್ಯಂತರ ಅರ್ಜಿಯನ್ನು ಸಲ್ಲಿಸಲು ಕ್ರಮವಹಿಸಲಾಗುತ್ತಿದೆ.<br><br>3. ಗುಂಜೂರು ಕ್ಲಬ್:<br><br>ಮಹಾಲೇಖಪಾಲರ ಅಡಿಟ್ ಆಕ್ಷೇಪಣೆಯಂತೆ ಒಟ್ಟು 6-00 ಎಕರೆ/ಗುಂಟೆ, ಪ್ರತಿ ಒಂದು ಎಕರೆಗೆ ಮಾರುಕಟ್ಟೆ ದರ ರೂ 1.00 ಕೋಟಿಗಳಂತೆ ಇದ್ದು, ಶೇಕಡ 10% ರಂತೆ ರೂ. 36,00,000-00 ಗಳನ್ನು ಮಾತ್ರ ಪಾವತಿಸಿದ್ದು, ರೂ 24,00,000-00 ಲಕ್ಷಗಳನ್ನು ಕಡಿಮೆ ಪಾವತಿಸಿಕೊಂಡಿರುವುದಾಗಿ ಮತ್ತು ಸದರಿ ಜಮೀನಿಗೆ ವ್ಯವಸಾಯೇತರ |

| | | |
|---|---|---|
| | | ಉದ್ದೇಶಕ್ಕೆ ಭೂಪರಿವರ್ತನೆ ಶುಲ್ಕ ರೂ. 10,46,000-00 ಗಳನ್ನು ಪಾವತಿಸಲು ಗುಂಜೂರು ಕ್ಲಬ್ ರವರಿಗೆ ಜಿಲ್ಲಾಧಿಕಾರಿಗಳವರ ಕಛೇರಿಯಿಂದ ದಿನಾಂಕ:15/07/2014 ರಂದು ತಿಳುವಳಿಕೆ ನೀಡಲಾಗಿದ್ದು, ಸದರಿ ಕ್ಲಬ್ ರವರು ಖಜಾನೆ ಕೋಡ್ ನಂ: 01030008 ರಂತೆ 24,00,000-00 ರೂ ಹಾಗೂ ಭೂಪರಿವರ್ತನೆ ಶುಲ್ಕ 10,46,000-00 ರೂಗಳನ್ನು ಪಾವತಿಸಿರುತ್ತಾರೆ.<br><br>ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಯ ಸಭೆಯಲ್ಲಿ ಸದರಿ ಗುತ್ತಿಗೆ ಮಂಜೂರಿಗೆ ಸಂಬಂಧಿಸಿದಂತೆ ಆಡಿಟ್ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿರುವಂತೆ ಗುಂಜೂರು ಕ್ಲಬ್‌ರವರಿಂದ ಬಾಕಿ ಇರುವ 6,58,55,200 ರೂ. ಗಳನ್ನು ಪಾವತಿಸಲು ದಿನಾಂಕ:29-01-2022 ಮತ್ತು 15-09-2023 ಹಾಗೂ 10-10-2023 ರಂತೆ ಕಾರ್ಯದರ್ಶಿಗಳು ಗುಂಜೂರು ಕ್ಲಬ್‌ರವರಿಗೆ ನೋಟೀಸ್‌ನೀಡಲಾಗಿರುತ್ತದೆ. ಸದರಿ ಗುಂಜೂರು ಕ್ಲಬ್‌ರವರು ಚೆಕ್‌ನಂ.000190 ರಂತೆ ರೂ.8,04,650/- ಗುತ್ತಿಗೆ ಮೊತ್ತವನ್ನು ಪಾವತಿಸುವುದಾಗಿ ಚೆಕ್‌ನೊಂದಿಗೆ ಜಿಲ್ಲಾಧಿಕಾರಿ ಕಛೇರಿಗೆ ದಿನಾಂಕ:23-11-2023 ರಂದು ಮನವಿಯನ್ನು ಸಲ್ಲಿಸಿ, ದಿನಾಂಕ:10-10-2023 ರಂದು ಹೊರಡಿಸಿರುವ ನೋಟೀಸ್‌ನ್ನು ರದ್ದುಗೊಳಿಸಲು ಕೋರಿ ಮನವಿಯನ್ನು ಸಲ್ಲಿಸಿರುತ್ತಾರೆ.<br><br>ಏತನ್ಮಧ್ಯೆ ಗುಂಜೂರು ಕ್ಲಬ್‌ರವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸರ್ಕಾರ, ಜಿಲ್ಲಾಧಿಕಾರಿಗಳು ಹಾಗೂ ತಹಶೀಲ್ದಾರ್‌ರವರುಗಳನ್ನು ಪ್ರತಿವಾದಿಗಳನ್ನಾಗಿ ಮಾಡಿ, ಡಬ್ಲ್ಯೂಪಿ 24849/2023 ರಂತೆ ಪ್ರಕರಣ ದಾಖಲಿಸಿದ್ದು, ದಿನಾಂಕ:10-11-2023 ರಂದು ಮಾನ್ಯ ನ್ಯಾಯಾಲಯವು, "Respondent No. is restrained from taking any coercive action against the petitioner, till the next date of hearing" ಎಂದು ಆದೇಶಿಸಿದ್ದು, ಸದರಿ ಪ್ರಕರಣಕ್ಕೆ ಕಂಡಿಕೆವಾರು ಉತ್ತರವನ್ನು ಸಲ್ಲಿಸಲಾಗಿದೆ. ಮಾನ್ಯ ನ್ಯಾಯಾಲಯವು. ದಿನಾಂಕ:16-07-2025 ರಂದು ಅಂತಿಮ ಆದೇಶ ಹೊರಡಿಸಿರುತ್ತದೆ. ಸದರಿ ಆದೇಶದಲ್ಲಿ "In that view of the matter without expressing any opinion on the veracity of the petitioner herein seeing benefit of Rule 22-A of the Rule 1969, the respondent–authorities shall not take any precipitative action against the petitioner herein, till the consideration of the reply that may be filed by the petitioner as stated above. It is also to be noted that since, the cheque bearing no.000190 drawn on Bank of Baroda dated22-11-2023 has not be realized by the respondent- authorities, petitioner is directed to |

| | | |
|---|---|---|
| | | issue on more cheque with regard to the same within one week from the date of receipt of this order" ಎಂದು ಆದೇಶವಾಗಿರುತ್ತದೆ.<br><br>ದಿನಾಂಕ:22-11-2023 ರಂದು ಗುಂಜೂರು ಕ್ಲಬ್‌ರವರು ರೂ.8,04,650/- ಗಳಿಗೆ ನೀಡಲಾಗಿದ್ದ ಚೆಕ್‌ನ್ನು ನಗದೀಕರಣ ಮಾಡಿಕೊಂಡಿರುವುದಿಲ್ಲವಾದ್ದರಿಂದ ಹಾಗೂ ಕರ್ನಾಟಕ ಭೂ ಮಂಜೂರಾತಿ ನಿಯಮ 1969 ರ ಕಲಂ 19, 22ಎ ರಡಿ ವ್ಯವಸಾಯೇತರ ಉದ್ದೇಶಕ್ಕೆ ಮಾರ್ಗಸೂಚಿ ಬೆಲೆಯ ಶೇ.2.5% ರಷ್ಟು ಮೊತ್ತವನ್ನು ಪ್ರಕರಣದ ವಾದಿಗಳಿಗೆ ಪಾವತಿಸಲು ನಿರ್ದೇಶಿಸಿದ್ದು, ಪ್ರಕರಣದ ಅಂತಿಮ ಆದೇಶವಾದ ಮೂರು ವಾರಗಳೊಳಗಾಗಿ ಸದರಿ ಗುಂಜೂರು ಕ್ಲಬ್‌ರವರು ನೀಡುವ ಮನವಿ (ಮೊತ್ತ ಪಾವತಿಯ ಕುರಿತು) ಯನ್ನು ಪರಿಗಣಿಸಲು ನಿರ್ದೇಶಿಸಿದ್ದು, ಈ ವಿಚಾರದಲ್ಲಿ ದಿನಾಂಕ:23-07-2025 ರಂದು ಗುಂಜೂರು ಕ್ಲಬ್‌ರವರು ಮತ್ತೊಮ್ಮೆ ಚೆಕ್‌ನೊಂದಿಗೆ ಮನವಿಯನ್ನು ಸಲ್ಲಿಸಿರುತ್ತಾರೆ. ಮಾನ್ಯ ಉಚ್ಛ ನ್ಯಾಯಾಲಯದ ದಿನಾಂಕ:16-07-2025 ರ ಆದೇಶದ ಕುರಿತು ಕಾನೂನು ಇಲಾಖೆಯ ಅಭಿಪ್ರಾಯ ಪಡೆದು ನಿಯಮಾನುಸಾರ ಮುಂದಿನ ಕ್ರಮವಹಿಸಲಾಗುವುದು.<br><br>4. ಗಾಲ್ಫ್ ಕ್ಲಬ್ : - ಸದರಿ ಕ್ಲಬ್ ಗೆ ಸಂಬಂಧಿಸಿದಂತೆ ಕಂದಾಯ ಇಲಾಖೆಯಿಂದ ಪ್ರವಾಸೋಧ್ಯಮ ಇಲಾಖೆಗೆ ಹಂಚಿಕೆ ಮಾಡಲಾಗಿದ್ದು, ಪ್ರವಾಸೋದ್ಯಮ ಇಲಾಖೆಯು ಅನಂತರದಲ್ಲಿ ಉಪಗುತ್ತಿಗೆಯನ್ನು ಗಾಲ್ಫ್ ಕ್ಲಬ್ ಗೆ ನೀಡಿರುತ್ತದೆ.<br>5. ನಾರ್ಥ ಕೂರ್ ಕ್ಲಬ್:<br><br>ನಾರ್ಥ ಕೂರ್ ಕ್ಲಬ್ ರವರು ನಿಗಧಿಪಡಿಸಿರುವ ಗುತ್ತಿಗೆ ಬಾಡಿಗೆಯನ್ನು ಪಾವತಿಸಿರುತ್ತಾರೆ.<br><br>6. ವಿವೇಕ್ ಫ್ರೆಂಡ್ಸ್ ಸ್ಪೋರ್ಟ್ಸ್ ಕ್ಲಬ್ (ರಿ ರವರು ನಿಗಧಿಪಡಿಸಿರುವ ಗುತ್ತಿಗೆ ಬಾಡಿಗೆಯನ್ನು ಪಾವತಿಸಿರುತ್ತಾರೆ.<br>7. ರೋಟರಿ ಕ್ಲಬ್ ಹೊನ್ನಾವರ ಇವರು ನಿಗಧಿಪಡಿಸಿರುವ ಗುತ್ತಿಗೆ ಬಾಡಿಗೆಯನ್ನು ಪಾವತಿಸಿರುತ್ತಾರೆ.<br>8. 8. ಸಿಟಿ ಹೆಲ್ತ್ ಕ್ಲಬ್ ಶಿವಮೊಗ್ಗ ರವರು ನಿಗಧಿಪಡಿಸಿರುವ ಗುತ್ತಿಗೆ ಬಾಡಿಗೆಯನ್ನು ಪಾವತಿಸಿರುತ್ತಾರೆ. |

| | | |
|---|---|---|
| ಊ) | ಕರ್ನಾಟಕ ಭೂಮಿ ನೀಡಿಕೆ ನಿಯಮಗಳು 1969ರನ್ವಯ ಗುತ್ತಿಗೆ ಅವಧಿ 10 ವರ್ಷಗಳು ಮೀರಿದ್ದಲ್ಲಿ, ಸರ್ಕಾರದ ಪೂರ್ವಾನುಮತಿ ಪಡೆಯಬೇಕಾಗಿದ್ದು, ಪೂರ್ವಾನುಮತಿ ಪಡೆಯದೇ ಕ್ಲಬ್ ನಡೆಸುತ್ತಿರುವವರ ಮಾಹಿತಿ ಹಾಗೂ ಸದರಿ ಕ್ಲಬ್‌ಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ? (ಸಂಪೂರ್ಣವಾದ ಮಾಹಿತಿ ನೀಡುವುದು) | ಬೆಂಗಳೂರು ಪ್ರೆಸ್ ಕ್ಲಬ್ (ರಿ), "ಬೋರಿಂಗ್ ಇನ್‌ಸ್ಟಿಟ್ಯೂಟ್" "ಮೆ॥ ಕರ್ನಾಟಕ ಗಾಲ್ಸ್ ಅಸೋಸಿಯೇಷನ್", "ಮೆ\|\| ಗುಂಜೂರು ಕ್ಲಬ್" ಸಿಟಿ ಹೆಲ್ತ್ ಕ್ಲಬ್ ಶಿವಮೊಗ್ಗ, ವಿವೇಕ್ ಫ್ರೆಂಡ್ಸ್ ಸ್ಪೋರ್ಟ್ಸ್ ಕ್ಲಬ್, ನೀಡಿರುವ ಗುತ್ತಿಗೆ ಅವಧಿ ಚಾಲ್ತಿಯಲ್ಲಿರುತ್ತದೆ.<br><br>ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಹೊನ್ನಾವರ ಗ್ರಾಮದ ಸ.ನಂ 517 ಎಂ ಗಾಂವಠಾಣಾ ಜಮೀನಿನ ಪೈಕಿ 2-18-0 ಜಮೀನನ್ನು ಜಿಲ್ಲಾಧಿಕಾರಿಗಳು ಉತ್ತರ ಕನ್ನಡ ಕಾರವಾರ ರವರ ಆದೇಶ ಕ್ರಮಾಂಕ LND-1/DSR/761/87-88 ದಿನಾಂಕ:25-2-1991 ರಂತೆ ರೋಟರಿ ಕ್ಲಬ್ ಹೊನ್ನಾವರ ರವರಿಗೆ ಭೂಬಾಡಿಗೆ ಮೇಲೆ ದಿನಾಂಕ:22-02-1991 ರಿಂದ ಅನ್ವಯವಾಗುವಂತೆ 05 ವರ್ಷಗಳ ಅವಧಿಗೆ ನೀಡಿದ್ದು ಇರುತ್ತದೆ. ನಂತರ ಸರ್ಕಾರದ ಆದೇಶ ಕ್ರಮಾಂಕ ಆರ್.ಡಿ/46/LJN/02 ದಿನಾಂಕ: 15-10-2003 ರಂತೆ ಸದರಿ ಲೀಜ್ ಅವಧಿಯನ್ನು 22-02-1996 ರಿಂದ ಅನ್ವಯವಾಗುವಂತೆ ದಿನಾಂಕ 21-02-2011 ರ ಅವಧಿಗೆ ನವೀಕರಿಸಲು ಅನುಮೋದನೆ ನೀಡಿದಂತೆ ಸದರಿ ಲೀಜ ದಿನಾಂಕ: 22-02-1996 ರಿಂದ 15 ವರ್ಷಗಳ ಅವಧಿಯ ವರೆಗೆ ವಿಸ್ತರಿಸಿದ್ದ ಇರುತ್ತದೆ. ಪ್ರಸ್ತುತವಾಗಿ ದಿನಾಂಕ 21-02-2011 ರಂದು ಗುತ್ತಿಗೆ ಅವಧಿ ಮುಗಿದಿರುತ್ತದೆ. ಗುತ್ತಿಗೆ ಅವಧಿ ವಿಸ್ತರಿಸಲು ಪುನ: ರೋಟರಿ ಕ್ಲಬ್ ಇವರಿಂದ ಅರ್ಜಿ ಸ್ವೀಕೃತವಾಗಿದ್ದು. ದಾಖಲಾತಿಗಳೊಂದಿಗೆ ಗುತ್ತಿಗೆ ಅವಧಿ ವಿಸ್ತರಿಸುವ ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು.<br>ನಾರ್ಥ ಕೂರ್ ಕ್ಲಬ್ ರವರಿಗೆ ಗುತ್ತಿಗೆ ನೀಡಿರುವ ಜಮೀನಿನ ಗುತ್ತಿಗೆ ಅವಧಿ ವಿಸ್ತರಿಸಲು ಪುನ: ಅರ್ಜಿ ಸ್ವೀಕೃತವಾಗಿದ್ದು ಪರಿಶೀಲನೆಯಲ್ಲಿರುತ್ತದೆ. |

ಸಂಖ್ಯೆ: ಆರ್‌ಡಿ 138 ಎಲ್‌ಜಿಕ್ಯೂ 2025

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು